ಓ ಎಸ್ 386/2008

**PW 1**

ದಿಃ 09-12-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲು ಃ ಶ್ರೀ ವಿ.ವಿ.ಕೆ ವಕೀಲರಿಂದ ಪ್ರತಿವಾದಿ ನಂ.6 ರ ಪರ;

ಈರಪ್ಪಾ ನನ್ನ ಗಂಡ, ಅವರ ಜೊತೆ ಮದುವೆಯಾಗಿ ಸುಮಾರು 25 ವರ್ಷಗಳು ಆಗಿರುತ್ತವೆ. ಮದುವೆ ಆಗುವ ಮೊದಲು ಮನೆತನದಲ್ಲಿ ಆಗಿರುವಂತಹ ವ್ಯವಹಾರದ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ಸರ್ವೆ ನಂ. 282/3 ನ ಪಹಣಿ ಪತ್ರಿಕೆಯಲ್ಲಿ ಶಿವಲಿಂಗಪ್ಪಾರವರ ಹೆಸರು ಇರುತ್ತದೆ ಎಂದರೆ ಸರಿ. ಶಿವಲಿಂಗಪ್ಪಾರವರು ಉಳಿಮೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಾವೆಲ್ಲರೂ ಕೂಡಿ ಮಾಡುತ್ತಿದ್ದೇವೆ ಎಂದು ನುಡಿದಿರುತ್ತಾರೆ. ನಾವೆಲ್ಲರೂ ಉಳಿಮೆ ಮಾಡುತ್ತಿದ್ದವು ಎಂದು ತೋರಿಸಲು ಯಾವುದೇ ಕಾಗದ ಪತ್ರಗಳು ಇರುವುದಿಲ್ಲ ಶಿವಲಿಂಗಪ್ಪಾರವರು ಮನೆತನದ ಹಿರಿತನ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ಕಾಗದ ಪತ್ರಗಳು ಇರುವುದಿಲ್ಲ ಶಿವಲಿಂಗಪ್ಪಾ ಇವರ ಹೆಸರಿನ ಮುಂಚೆ ಅವರ ತಂದೆ ದುಂಡಪ್ಪಾ ರವರ ಹೆಸರು ಇತ್ತು ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದುಂಡಪ್ಪಾ ಜೀವಂತ ಇದ್ದಾಗ ಅವರೊಡನೆ ನಮಗೆ ಸಮಾಯಿಕವಾಗಿ ಪಾಲು ಇರುತ್ತದೆ ಎಂದು ಯಾವುದೆ ಕಾಗದ ಪತ್ರಗಳನ್ನು ಹಾಕಿರುವುದಿಲ್ಲ ಈ ದಾವೆ ಹಾಕುವ ಮುಂಚೆ ದುಂಡಪ್ಪಾ ಇವರು ಮನೆತನದ ಹಿರಿತನ ಮಾಡುತ್ತಿದ್ದರು ನಮಗೆ ಸಮಾಯಿಕವಾದ ಹಕ್ಕು ಇದೆ ಎಂದು ನಾವು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಾನು ಖನಗಾಂವದಲ್ಲಿ ಇರುತ್ತೇನೆ, ನನ್ನ ಮನೆ.ನಂ. 253. ಮೊದಲು ನಾವು ಎಲ್ಲರೂ ಕೂಡಿ ಆ ಮನೆಯಲ್ಲಿ ಇದ್ದೇವು, ಈಗ ನಾನು ಅಲ್ಲಿ ತಗಡಿನ ಶೆಡ್ಡಿನಲ್ಲಿ ವಾಸವಾಗಿದ್ದೇನೆ. ಎಲ್ಲರೂ ಕೂಡಿ ಇರುತ್ತೇವೆ ಎನ್ನಲು ನನ್ನ ಹತ್ತಿರ ಪಡಿತರ ಚೀಟಿ ಇರುವುದಿಲ್ಲ, ಮಳೆ ಬಂದಿದ್ದರಿಂದ ಅದು ನಾಶವಾಗಿರುತ್ತದೆ. ನನ್ನ ಹತ್ತಿರ ಮತದಾರರ ಚೀಟಿ ಸಹ ಇರುವುದಿಲ್ಲ, ಅದು ಸಹ ಮಳೆಯಲ್ಲಿ ನಾಶವಾಗಿರುತ್ತದೆ. ಮನೆಗೆ ಲೈಟ ಇರುತ್ತದೆ, ಸದರಿ ಲೈಟ ಬಿಲ್ಲ ತುಂಬಿದ ರಸೀದಿ ನನ್ನ ಹತ್ತಿರ ಇರುವುದಿಲ್ಲ. ಮನೆ ಶಿಂಗವಲಿಂಗಪ್ಪ ಇವರ ಹೆಸರಿನಲ್ಲಿ ಇದೆ.

ಕಾಗದಗಳನ್ನು ಮಳೆಯಿಂದ ನಾಶವಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ರೇಶನ ಕಾರ್ಡ ಹಾಗೂ ಮತದಾರರ ಚೀಟಿ ಹಳೆಯದು ಮತ್ತೇ ತೆಗೆಯಿಸಿಕೊಳ್ಳಬಹುದು ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ಬಸಪ್ಪಾ ಇವರು ಎಂದು ತೀರಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವದಿಲ್ಲ. ಬಸಪ್ಪಾ ರವರ ಮಗ ಈರಪ್ಪ ಎಂದು ತೀರಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವದಿಲ್ಲ, ಬಸಪ್ಪಾ ರವರ ಮಗ ಈರಪ್ಪನ ಹೆಂಡತಿ ಎಂದು ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈರಪ್ಪನ ಹೆಂಡತಿ ಯಾರು ಎಂದು ನನಗೆ ಗೊತ್ತಿಲ್ಲ. ಬಸಲಿಂಗಪ್ಪಾ ಎಂದು ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಬಸಲಿಂಗಪ್ಪಾ ಇವರ ಹೆಂಡತಿಯ ಹೆಸರು ನಿಂಗವ್ವಾ, ಸದರಿ ಅವಳು ಮೃತಪಟ್ಟಿರುತ್ತಾಳೆ, ಬಸಲಿಂಗಪ್ಪಾ ಇವರು ಮುಂಚೆ ಮೃತ ಪಟ್ಟಿರುತ್ತಾರೆ ನಂತರ ನಿಂಗವ್ವಾ ಮೃತಪಟ್ಟಿರುತ್ತಾಳೆ. ಬಸಲಿಂಗಪ್ಪಾ ಹೆಂಡತಿ ನಿಂಗವ್ವಾ ಇವರನ್ನು ವಂಶಾವಳಿಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಾಗಿರುವುದಿಲ್ಲ, ಈಗ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ. ಬಸವಣ್ಣೆಪ್ಪ ರವರು ಎಂದು ತೀರಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವದಿಲ್ಲ. ಈರಪ್ಪ, ಬಸಲಿಂಗಪ್ಪಾ ಹಾಗೂ ಬಸವಣ್ಣೆಪ್ಪ ಇವರ ಮಧ್ಯೆ 1965 ಪಾಲು ಆಗಿರುತ್ತದೆ ಎಂದರೆ ಸರಿಯಲ್ಲ. ಪಾಲು ಪ್ರಕಾರ ಡಾಯರಿ ಆಗಿರುತ್ತದೆ ಹಾಗೂ ಪಹಣಿಗಳಲ್ಲಿ ಹೆಸರು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿದಿರುತ್ತಾರೆ.

ಬಸವಣ್ಣೆಪ್ಪ ಜೀವಂತ ಇದ್ದಾಗ ದಾವೆ ಜಮೀನು ಮತ್ತು ಮನೆಯಲ್ಲಿ ತನ್ನ ಪಾಲು  ಕೇಳಿರುವುದಿಲ್ಲ, ಬಸವಣ್ಣೆಪ್ಪ ಇವರು ಕೂಡಿ ಇದ್ದುದ್ದಕ್ಕೆ ಯಾವುದೇ ಕಾಗದ ಇರುವುದಿಲ್ಲ. ಬಸಪ್ಪಾ ಇವರು ಜೀವಂತ ಇದ್ದಾಗ ಕೂಡಿ ಇದ್ದರು ಎಂದು ತೋರಿಸಲು ಯಾವುದೇ ಕಾಗದ ಇರುವುದಿಲ್ಲ, ಇವರು ಏಕತ್ರ ಕುಟುಂಬದ ಸದಸ್ಯರು ಎಂದು ತೋರಿಸಲು ಯಾವುದೇ ಕಾಗದ ಇರುವುದಿಲ್ಲ. ದುಂಡಪ್ಪ ಇವರ ನಂತರ ಶಿವಲಿಂಗಪ್ಪಾ ಇವರು ಈ ದಾವೆ ಆಸ್ತಿಯ ಮಾಲೀಕರು ಎಂದರೆ ಸರಿ. ಪ್ರತಿವಾದಿ ನಂ. 6 ಇವರು ದಿಃ 15-11-2011 ರಂದು ಶಿವಲಿಂಗಪ್ಪಾ ಇವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಸುಳ್ಳು ಕಾಗದ ಮಾಡಿಕೊಂಡಿರುವ ಬಗ್ಗೆ ನಾನು ತಕರಾರು ಮಾಡಿರುತ್ತೇನೆ. ಪ್ರತಿವಾದಿ ನಂ. 6 ರವರು ವಿಚಾರಣೆ ನಂತರ ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಪೇಪರದಲ್ಲಿ ನಾನು ಖರೀದಿ ಮಾಡಬಾರದು ಎಂದು ಹೇಳಿರುವುದಿಲ್ಲ. ನ್ಯಾಯಾಲಯಲ್ಲಿ ದಾವೆ ಇರುತ್ತದೆ, ಖರೀದಿ ಮಾಡಬಾರದು ಎಂದು ನಾನು ಪೇಪರದಲ್ಲಿ ಹಾಕಿಸಿರುವುದಿಲ್ಲ.  ಈ ಜಮೀನದಲ್ಲಿ ಈರಪ್ಪನವರ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಯಲ್ಲಪ್ಪಾ ದಾವೆ ಮಾಡಿದಾಗ ನನ್ನ ಗಂಡ 3 ನೇ ಪ್ರತಿವಾದಿ ಇದ್ದ. ತಕರಾರು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ, ಈರಪ್ಪ ಇವರು ತಕರಾರು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಲ್ಲಪ್ಪ ಇವರು ತಮ್ಮದು ಹಾಗೂ ಈರಪ್ಪ ಇವರದು ಯಾವುದೇ ಹಕ್ಕು ಇರುವುದಿಲ್ಲ ಎಂದು ದಾವೆ ಹಿಂದೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಬರೆದಿರುವ ಎಲ್ಲ ಸಂಗತಿಗಳು ಯಲ್ಲಪ್ಪ ಇವರು ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯವರು ವಾದಿಯಾಗಿದ್ದು, ಅವರು ಪ್ರತಿವಾದಿ ನಂ. 6 ರವರಿಗೆ ಲುಕ್ಸಾನ ಪಡಿಸುವ ಉದ್ದೇಶದಿಂದ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.6 ರವರ ಹೆಸರು ಉತಾರದಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.6 ರವರು ಈ ಜಮೀನು ಖರೀದಿ ನಂತರ ಅದರಲ್ಲಿ ಅಭಿವೃದ್ದಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.6 ರವರು ಸದರಿ ಜಮೀನಿನ ಮೇಲೆ ಬ್ಯಾಂಕಿನ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಈರಪ್ಪ ಹಾಗೂ ಇತರರು ಎಂದು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ಈ ಜಮೀನದಲ್ಲಿ ನನ್ನದು ಪಾಲು ಇಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಕುಮಾರಿ. ಶೋಭಾ)

**ಹೆ.ದಿ.&ನ್ಯಾ.ದಂ.,ಗೋಕಾಕ.**